**ದಿಃ 03-11-2020 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಶ್ರೀ ಕೆ ಎಸ್ ವಿ ವಕೀಲರಿಂದಃ**

ದಿಃ05-10-1978 ನೇ ಸಾಲಿನಲ್ಲಿ ನನ್ನ ತಂದೆ ತೀರಿಕೊಂಡಿರುತ್ತಾರೆ. ನನ್ನ ತಂದೆ 1982 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅವರು ಆತ್ಮಹತ್ಯೆ ಮಾಡಿಕೊಂಡರು ಎಂದರೆ ಸರಿಯಲ್ಲ. ನಮ್ಮ ತಂದೆಗೆ ಬಹಳ ಬಡತನ ಇತ್ತು ಎಂದರೆ ಸರಿ . ನಮ್ಮ ತಂದೆಗೆ ಮನೆ ನಿರ್ವಹಣೆ ಮಾಡುವ ಆರ್ಥಿಕ ತೊಂದರೆ ಇತ್ತು ಎಂದರೆ ಸರಿ . ಅಂತಹ ಸಮಯದಲ್ಲಿ 1 ನೇ ಪ್ರತಿವಾದಿಯ ಗಂಡ ಕೂಲಿನಾಲಿ ಮಾಡಿ ಮನೆ ನಿರ್ವಹಣೆ ಮಾಡಿದ್ದಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನ್ನ ಅಕ್ಕಂದಿರಾದ 1 ನೇ ವಾದಿ ಮತ್ತು ಶಂಕರಮ್ಮ ನಮ್ಮನ್ನು ನೋಡಿಕೊಂಡಿದ್ದಾರೆ ಅನ್ನುತ್ತಾರೆ. 1 ನೇ ಪ್ರತಿವಾದಿಯ ಗಂಡ ಕೂಲಿನಾಲಿ ಮಾಡಿ ದಿನೇದಿನೇ ಮನೆ ನೋಡಿಕೊಂಡು ವಿದ್ಯಾಭ್ಯಾಸ ಕೊಡಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ಅಣ್ಣ ಸುಮಾರು ದಿವಸ  ಸ್ಟೈಪಂಡ್ ತೆಗೆದುಕೊಂಡು ಮನೆಯಲ್ಲಿ ಇದ್ದರು ಎಂದರೆ ಸರಿ . ಅಂತಹ ಸಮಯದಲ್ಲಿ 1 ನೇ ಪ್ರತಿವಾದಿಯ ತಂದೆ ಶಿವರುದ್ರಪ್ಪ ಇವರು ಕೆಲಸ ಕೊಡಿಸಿ ಮದುವೆ ಮಾಡಿಸಿದರು ಎಂದರೆ ಸುಳ್ಳು. ಅಣ್ಣನ ಮದುವೆಯ ಸಮಯದಲ್ಲಿಯೇ 1 ನೇ ವಾದಿಯ ಮದುವೆ ಮಾಡಿದರು ಎಂದರೆ ಸರಿ . 1 ನೇ ಪ್ರತಿವಾದಿಯ ಅಪ್ಪನ ಕಡೆಯಿಂದ ಹಣವನ್ನು ಪಡೆದು 1 ನೇ ವಾದಿಯ ಮದುವೆ ಮಾಡಿಸಿದ್ದಾರೆ ಎಂದರೆ ಸುಳ್ಳು. 1 ನೇ ವಾದಿಗೆ ಏನೇನು ಕೊಡಬೇಕಾಗಿತ್ತು ಮದುವೆಯ ಸಮಯದಲ್ಲಿ ಹಣದ ರೂಪವಾಗಿ ಹಾಗೂ ಬಂಗಾರದ ರೂಪವಾಗಿ ಕೊಟ್ಟಿರುತ್ತಾರೆ ಎಂದರೆ ಸುಳ್ಳು.

2. ನಾನು ಎಸ್ ಎಸ್ ಎಲ್ ಸಿಯ ಜಸ್ಟ್ ಪಾಸ್ ಆಗಿರುತ್ತೇನೆ ಎಂದರೆ ಸರಿ . ನನಗೆ ಕೆಲಸ ಕೂಡಿಸಬೇಕು ಅಂತ ನನ್ನ ಅಣ್ಣನಿಗೆ ಕೇಳುತ್ತಿದ್ದೆ ಎಂದರೆ ಸರಿ . ನನ್ನ ಅಣ್ಣ ಕೆಲಸ ಕೊಡಿಸಬೇಕು ಅಂತ ನನಗೆ ಹಾರ್ಟಿಕಲ್ಚರ್ ತರಬೇತಿಗೆ ಕಳುಹಿಸಿದರು ಎಂದರೆ ಸರಿ . ಸದರಿ ವಿದ್ಯಾಭ್ಯಾಸಕ್ಕೆ ನನ್ನ ಅಣ್ಣ ಸಹಾಯ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅಮ್ಮ ಮಾಡಿರುತ್ತಾರೆ. ಸದರಿ ತರಬೇತಿಯಲ್ಲಿ ನಾನು ಕಡಿಮೆ ಅಂಕ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ನನಗೆ ಕೆಲಸ ಸಿಕ್ಕಿಲ್ಲ ಎಂದರೆ ಸುಳ್ಳು.

3. ನಮ್ಮ ಅಣ್ಣ ಯಾವ ಇಸ್ವಿಯಲ್ಲಿ ಹುಟ್ಟಿದ್ದಾರೆ ಅಂತ ಗೊತ್ತಿಲ್ಲ. ನನ್ನ ಅಣ್ಣನೇ 1 ನೇ ವಾದಿಗಿಂತ ದೊಡ್ಡವರು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಚಿಗಟೇರಪ್ಪ ಎಂಬುವರು ಇದ್ದರು ಅವರೇ ನಮ್ಮನ್ನು ಸಾಕಿದ್ದಾರೆ. ಚಿಗಟೇರಪ್ಪ ಆದನಂತರ ಗುರುಶಾಂತಪ್ಪ ದೊಡ್ಡವರು ಎಂದರೆ ಸರಿ . ಚಿಗಟೇರಪ್ಪ ಮಾನಸಿಕವಾಗಿ ಅಸ್ಥವ್ಯಸ್ಥ ಇದ್ದ ಎಂದರೆ ಸರಿಯಲ್ಲ. ದುಡಿಯುತ್ತಿದ್ದರು. ಆತನು ದುಡಿಯುತ್ತಿರಲಿಲ್ಲ ಮಾನಸಿಕವಾಗಿ ಅಸ್ಥವ್ಯಸ್ಥ ಇದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಮುಂದುವರಿದು ಅವರ ಅಣ್ಣ ಹೊಡಿದು ಬಡಿದು ಆ ರೀತಿ ಮಾಡಿದ್ದಾರೆ ಅನ್ನುತ್ತಾರೆ.

4. ಚಿಗಟೇರಪ್ಪ ಯಾವಾಗ ತೀರಿಕೊಂಡರು ಅಂತ ಗೊತ್ತಿಲ್ಲ. ನಮ್ಮ ಮನೆತನದ ನಿರ್ವಹಣೆ ಗುರುಶಾಂತಪ್ಪ ಆದಾಯದ ಮೇಲೆ ಅವಲಂಬಿಸಿತ್ತು ಎಂದರೆ ಸರಿಯಲ್ಲ. 1 ನೇ ವಾದಿಯ ಮಕ್ಕಳಿಗೆ ಹಾಗೂ ಶಂಕರಮ್ಮ ಮಕ್ಕಳಿಗೆ ಗುರುಶಾಂತಪ್ಪ ಓದಿಸಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಮಕ್ಕಳಿಗೂ ಗುರುಶಾಂತಪ್ಪ ಓದಿಸಿದ್ದು ಎಂದರೆ ಸರಿಯಲ್ಲ. ನಮ್ಮ ಅಣ್ಣ ಮೇಲೆ ಹೇಳಿದವರಿಗೂ ವಿದ್ಯಾಭ್ಯಾಸ ಕೊಡಿಸಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ಶಂಕರಮ್ಮನ ಮದುವೆಯನ್ನು ಗುರುಶಾಂತಪ್ಪ ಮುಂದಾಳುತ್ವದಲ್ಲಿ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಮ್ಮ ಮಾಡಿಸಿರುತ್ತಾರೆ. ಶಂಕರಮ್ಮನ ಮದುವೆಯ ಸಮಯದಲ್ಲಿ ಏನೇನು ಕೊಡಬೇಕಾಗಿತ್ತು ಅದನ್ನು ಕೊಟ್ಟು ಕಳುಹಿಸಿದ್ದಾರೆ ಎಂದರೆ ಸರಿ. ಶಂಕರಮ್ಮ ಈಗಲೂ ಬದುಕಿರುತ್ತಾರೆ ಎಂದರೆ ಸರಿ. ಅವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿದರೆ ಸತ್ಯ ಗೊತ್ತಾಗುತ್ತದೆ ಅಂತ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಅವರು ಏನು ಬೇಡ ಅಂತ ಹೇಳಿದ್ದಾರೆ. ಅವರು ಕೊಡುವುದೆಲ್ಲಾ ಕೊಟ್ಟಿದ್ದಾರೆ ಅಂತ ಬೇಡ ಅಂತ ಹೇಳಿದ್ದಾರೆ ಎಂದರೆ ಸರಿಯಲ್ಲ.

6. ಗುರುಶಾಂತಪ್ಪ ಅವರ ಮನೆಯವರು ಮತ್ತು ಮಕ್ಕಳು ಚಿತ್ರದುರ್ಗದಲ್ಲಿ ವಾಸ ಇರುತ್ತಾರೆ ಎಂದರೆ ಸರಿ . ಚಿತ್ರದುರ್ಗದಲ್ಲಿ ಇರುವ ಮನೆ ತರಳಬಾಳು ಬಡವಾಣೆಯಲ್ಲಿ ಇರುತ್ತದೆ ಎಂದರೆ ಸರಿ. ತರಳಬಾಳು ಸಂಸ್ಥೆಯ ನೌಕರರು ಸೇರಿ ಬಡಾವಣೆ ಮಾಡಿದ್ದು ಎಂದರೆ ಸರಿ . ಶಿವರುದ್ರಪ್ಪ ಅವರ ಹೆಸರಲ್ಲಿ ಸೈಟನ್ನು ಕೊಂಡುಕೊಂಡಿದ್ದರು ಎಂದರೆ ಸರಿ . ಸದರಿ ಜಾಗದಲ್ಲಿ ಗುರುಶಾಂತಪ್ಪ ಮನೆ ಕಟ್ಟಿಸಿದ್ದಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಮ್ಮ ಮನೆಯ ಆದಾಯದಿಂದ ಮನೆ ಕಟ್ಟಿಸಿದ್ದಾರೆ ಅನ್ನುತ್ತಾರೆ. 1 ನೇ ಪ್ರತಿವಾದಿಯ ಪ್ರೀತಿ ವಿಶ್ವಾಸಕ್ಕೆ ಶಿವರುದ್ರಪ್ಪ ಜಾಗವನ್ನು ಕೊಟ್ಟು ಮನೆ ಕಟ್ಟಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಕ್ರಮ ಸಂಖ್ಯೆ-4, 5 ಮತ್ತು 8 ಗುರುಶಾಂತಪ್ಪನ ಸ್ವಂತ ಆದಾಯದಿಂದ ತೆಗೆದುಕೊಂಡಿದ್ದು ಎಂದರೆ ಸರಿಯಲ್ಲ. ಗುರುಶಾಂತಪ್ಪ ಸಂಬಳದ ಆದಾಯ ಹೊರತುಪಡಿಸಿ ಬೇರೆ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಮನೆಯ ಆದಾಯ ಇತ್ತು.

7. ನನ್ನ ತಂದೆಯ ಭಾಗಕ್ಕೆ ಸರ್ವೇ ನಂ.83/1, 1 ಎಕರೆ 32 ಗುಂಟೆ, ಸರ್ವೇ ನಂ.135/10 ಕ್ಷೇತ್ರ 1 ಎಕರೆ 2 ಗುಂಟೆ, ಸರ್ವೇ ನಂ.38/2 ಕ್ಷೇತ್ರ 2 ಎಕರೆ 4 ಗುಂಟೆ ಬಂದಿರುತ್ತವೆ. ಇನ್ನೂ ಜಮೀನುಗಳು ಇರುತ್ತವೆ ಆದರೆ ನನಗೆ ಈಗ ನೆನಪು ಇರುವುದಿಲ್ಲ. ದಾವಾ ಆಸ್ತಿ ಕ್ರಮ ಸಂಖ್ಯೆ-4, 5 ಮತ್ತು 8 ಯಾರಿಂದ ಖರೀದಿ ಮಾಡಿದ್ದು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನ್ನ ಅಣ್ಣನೇ ಖರೀದಿ ಮಾಡಿದ್ದು ಅನ್ನುತ್ತಾರೆ. ಎಷ್ಟು ಎಕರೆ ಮತ್ತು ಎಷ್ಟು ಮೊತ್ತಕ್ಕೆ ಖರೀದಿ ಮಾಡಿದ್ದಾರೆ ಅಂತ ನನಗೆ ಹೇಳಲು ಆಗುವುದಿಲ್ಲ. ಗುರುಶಾಂತಪ್ಪ ಸ್ವಯಾರ್ಜಿತ ಆಸ್ತಿ ಆಗಿರುವ ಕಾರಣ ಎಷ್ಟು ಎಕರೆ ಮತ್ತು ಎಷ್ಟು ಮೊತ್ತಕ್ಕೆ ಖರೀದಿ ಮಾಡಿದ್ದಾರೆ ಅಂತ ನಿಮಗೆ ಹೇಳಲು ಆಗುವುದಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಅವರು ನಮಗೆ ಏನು ಹೇಳುತ್ತಿರಲಿಲ್ಲ ಅನ್ನುತ್ತಾರೆ. ನಿಮ್ಮ ತಂದೆಗೆ ತೀರಿಕೊಂಡಾಗ ನಿಮಗೆ 10 ವರ್ಷ ವಯಸ್ಸಾಗಿತ್ತು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ 5

ವರ್ಷ ವಯಸ್ಸಾಗಿತ್ತು ಅನ್ನುತ್ತಾರೆ. ಶಂಕರಮ್ಮನಿಗೆ ಅಂದಾಜು ಎಷ್ಟು ವರ್ಷ ವಯಸ್ಸಾಗಿತ್ತು ಅಂತ ಗೊತ್ತಿಲ್ಲ. 1 ನೇ ವಾದಿಗೆ ಅಂದಾಜು ಎಷ್ಟು ವರ್ಷ ವಯಸ್ಸಾಗಿತ್ತು ಅಂತ ಗೊತ್ತಿಲ್ಲ.

8. ಗುರುಶಾಂತಪ್ಪನ ಜೀವಿತ ಕಾಲದಲ್ಲಿ ಪಾಲು ವಿಭಾಗ ಆಗಿರುತ್ತದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾವು ಕರೆದುಕೊಂಡು ಬಂದವರ ಮುಂದೆ ಭಾಗ ಮಾಡಿಸಿದೆ ಅವರನ್ನು ಎಬ್ಬಿಸಿ ಕಳುಹಿಸಿ ಅವರು ಕರೆದುಕೊಂಡು ಬಂದವ ಮುಂದೆ ಭಾಗ ಮಾಡಿಸಿದ್ದಾರೆ ಅನ್ನುತ್ತಾರೆ. ಅವರ ಕಡೆಯವರನ್ನು ಕರೆದುಕೊಂಡು ಬಂದು ಭಾಗ ಮಾಡಿರುತ್ತಾರೆ. ಆ ದಿನ ಪತ್ರ ಬರವಣಿಗೆ ಆಗಿತ್ತು ನಮಗೆ ಒಪ್ಪಿಗೆ ಇರಲಿಲ್ಲ. ಫೋರ್ಜರಿ ಮಾಡಿ ಸಹಿ ಮಾಡಿಸಿರುತ್ತಾರೆ. ಒತ್ತಾಯ ಮಾಡಿ ಸಹಿ ಮಾಡಿಸಿರುತ್ತಾರೆ. ನಾನು ಅದಕ್ಕೆ ಒಪ್ಪುವುದಿಲ್ಲ ಅಂತ ತಂಟೆ ತಕರಾರು ಮಾಡಿರುತ್ತೇನೆ. ಅದರ ಮೇಲೆ ನಾನು ದೂರನ್ನು ಕೊಟ್ಟಿರುವುದಿಲ್ಲ. ಈಗ ನಾನು ಬೇರೆ ಬೇರೆ ಜಮೀನುಗಳನ್ನು ಅನುಭವಿಸುತ್ತಿದ್ದೇನೆ ಎಂದರೆ ಸರಿ. ಪಾಲು ಪಟ್ಟಿಯಲ್ಲಿ ನಮೂದಿಸಿರುವ ಜಮೀನುಗಳನ್ನು ಅನುಭವಿಸುತ್ತಿದ್ದೇನೆ ಎಂದೆರ ಸರಿ ಆದರೆ ಒಪ್ಪುತ್ತಿಲ್ಲ.

9. ಎಲ್ಲೂ ಹೆಣ್ಣು ಕೊಡುವುದಿಲ್ಲ ಅಂತ ನಾನು ಅಕ್ಕನ ಮಗಳನೇ ಮದುವೆಯಾಗಿರುತ್ತೇನೆ ಎಂದರೆ ಸರಿಯಲ್ಲ. ದುಡ್ಡು ಕೊಡುತ್ತೇವೆ ಮದುವೆ ಆಗು ಅಂತ ಹೇಳಿದ್ದಕ್ಕೆ ಮದುವೆ ಆಗಿರುತ್ತೇನೆ. ಗುರುಶಾಂತಪ್ಪ ಇವರೇ ಮದುವೆ ಖರ್ಚು ನೋಡಿ ಮುಂದಾಳತ್ವ ನೋಡಿ ಮದುವೆ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಮ್ಮ ಮಾಡಿಸಿರುತ್ತಾರೆ. ನಮ್ಮ ಊರಲ್ಲಿ ಗೌಡರ ಮುನಿಯಪ್ಪ, ಮಹಾದೇವಪ್ಪ, ಈಶ್ವರಪ್ಪ, ಎಂ ಡಿ ನಿಂಗಪ್ಪ ಇವರು ನಮ್ಮ ಊರಿನ ಮುಂಖಡರು ಎಂದರೆ ಸರಿ . ಅವರು ಊರಲ್ಲಿ ಪಂಚಾಯಿತಿ ಮಾಡಿರುತ್ತಾರೆ ಎಂದರೆ ಸರಿ . ನಮ್ಮ ಊರಲ್ಲಿ ಸಿದ್ದಣ್ಣ ಎಸ್ ಇದ್ದಾರೆ ಎಂದರೆ ಸರಿ . ಅವರ ಸಮಕ್ಷಮದಲ್ಲಿಯೇ ಪಾಲು ವಿಭಾಗ ಪತ್ರದ ಬರವಣಿಗೆ ಆಗಿರುತ್ತದೆ ಎಂದರೆ ಸರಿ . ಸದರಿ ಪಾಲು ವಿಭಾಗ ಪತ್ರವನ್ನು ಸಿದ್ದಣ್ಣ ಬರೆದಿರುತ್ತಾರೆ ಎಂದರೆ ಸರಿ . ಸದರಿ ಪಾಲು ವಿಭಾಗ ಪತ್ರಕ್ಕೆ ನನ್ನ ಅಣ್ಣ ಗುರುಶಾಂತಪ್ಪ, 2 ನೇ ಪ್ರತಿವಾದಿ ಮತ್ತು ನಾನು ಸಹಿ ಮಾಡಿರುತ್ತೇವೆ ಎಂದರೆ ಸರಿ . ಸದರಿ ಪಾಲು ವಿಭಾಗ ಪತ್ರದ ಪ್ರಕಾರವೇ ಎಲ್ಲರೂ ಜಮೀನುಗಳನ್ನು ಸಾಗು ಮಾಡುತ್ತಿದ್ದೇವೆ ಎಂದರೆ ಸರಿ. ಗುರುಶಾಂತಪ್ಪನಿಗೆ ಲಿಂಗರಾಜು ಮತ್ತು ಚೈತ್ರಾ ಅಂತ ಮಕ್ಕಳು ಇದ್ದು ಅವರನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ . ಈ ಪಾಲು ಪಟ್ಟಿಯನ್ನು ತಯಾರು ಮಾಡುವ ಸಮಯದಲ್ಲಿ 1 ನೇವಾದಿ ಮತ್ತು ಶಂಕರಮ್ಮ ಇದ್ದರು ಎಂದರೆ ಸರಿಯಲ್ಲ. ಆಗ ನಮ್ಮ ಅಮ್ಮ ಪಾಲು ಪಟ್ಟಿಗೆ ಒಪ್ಪಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಮ್ಮನಿಗೆ ವಯಸ್ಸಾಗಿದ್ದು ಆಕೆಯ ಆರೋಗ್ಯ ಮತ್ತು ಖರ್ಚು ವೆಚ್ಚುಗಳನ್ನು 1 ನೇ ಪ್ರತಿವಾದಿಯ ಗಂಡ ನೋಡಿಕೊಂಡಿದ್ದಾರೆ ಎಂದರೆ ಸರಿಯಲ್ಲ.

10. ದಾವಾ ಆಸ್ತಿ ಕ್ರಮ ಸಂಖ್ಯೆ-4, 5 ಮತ್ತು 8 ನ್ನು ಪಾಲು ಪಟ್ಟಿಯಲ್ಲಿ ಸೇರಿಸಿಲ್ಲ ಎಂದರೆ ಸರಿ . ಸದರಿ ಆಸ್ತಿಗಳು ಗುರುಶಾಂತಪ್ಪ ಖರೀದಿ ಮಾಡಿದ್ದರಿಂದ ಸೇರಿಸಿಲ್ಲ ಎಂದರೆ ಸರಿಯಲ್ಲ. ಪಾಲು ಪಟ್ಟಿಯಲ್ಲಿ ಬಂದಂತಹ ಜಮೀನುಗಳನ್ನು ಇತ್ತಿಚೀಗೆ ಅಡಿಕೆ ಬೆಳೆದು ಅಭಿವೃದ್ದಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಶಂಕರಮ್ಮ ಇವರಿಗೆ ಈ ಪ್ರಕರಣದ ಎಲ್ಲಾ ವಿಷಯ ಗೊತ್ತು

ಅವರು ಪ್ರತಿವಾದಿಯ ಪರವಾಗಿ ಹೇಳುತ್ತಾರೆ ಅಂತ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯನ್ನು 1 ನೇ ಪ್ರತಿವಾದಿಯ ಗಂಡ ಮತ್ತು 2 ನೇ ಪ್ರತಿವಾದಿ ಚೆನ್ನಾಗಿ ನೋಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಅವಳನ್ನು ನೋಡಬೇಕು ಎಂಬ ಉದ್ದೇಶದಿಂದ ಪಾಲು ವಿಭಾಗ ಪತ್ರದಲ್ಲಿ ಅವಳ ಜೀವನಾಂಶಕೊಸ್ಕರ ಜಮೀನು ತೆಗೆದಿದ್ದಾರೆ ಎಂದರೆ ಸರಿ . ನನ್ನ ಅಮ್ಮನಿಗೆ ಜೀವನಾಂಶಕ್ಕೆ ತೆಗೆದಿರುವ ಜಮೀನನ್ನು ನಾನು ಅನುಭವಿಸುತ್ತಿದ್ದೇನೆ ಎಂದರೆ ಸರಿ .

11. ನನ್ನ ಹಾಗೂ ನನ್ನ ದೊಡ್ಡಪ್ಪನ ಮಕ್ಕಳ ನಡುವೆ ಗಲಾಟೆ ಆಗಿರುತ್ತದೆ ಎಂದರೆ ಸರಿ . ಮನೆಯ ಮುಂದಿನ ಜಾಗ ನನ್ನ ಸ್ವಂತ ಜಾಗ ಅಂತ ನಾನು ಹೇಳಿದ್ದು ಅವರು ಅದು ರಸ್ತೆ ಅಂತ ಗಲಾಟೆ ಆಯಿತು ಎಂದರೆ ಸರಿ . ಆ ಸಂಬಂಧ ದೂರು ಆಗಿರುತ್ತದೆ ಎಂದರೆ ಸರಿ . ನಾನು 1 ನೇ ವಾದಿ ಮಗಳನ್ನು ಮದುವೆ ಆಗಿರುವ ಕಾರಣ ಭಾಗ ಬರುತ್ತದೆ ಅಂತ ಷರೀಕಾಗಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಗುರುಶಾಂತಪ್ಪ ಈಗ ಜೀವಂತ ಇಲ್ಲ ಆ ಕಾರಣಕ್ಕಾಗಿ ಆಸ್ತಿ ಲಪಟಾಯಿಸಬೇಕು ಅಂತ ಸುಳ್ಳು ಕೇಸನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

12. ದಿಃ24-01-2007 ರಂದು ಆದಂತಹ ಪಾಲು ವಿಭಾಗ ಪತ್ರವನ್ನು ಪಶ್ನಿಸಿ ನಾನು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿಲ್ಲ. ಆಸ್ತಿಯನ್ನು ಲಪಟಾಯಿಸಬೇಕು ಅಂತ ಸುಳ್ಳು ದಾವೆಯನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ

**ದಿಃ 03-11-2020 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ ಎಸ್ ವಿ ವಕೀಲರಿಂದಃ**

5. 1 ನೇ ಪ್ರತಿವಾದಿಯ ತಂದೆಗೆ ಸುಮಾರು 78 ಎಕರೆ ಜಮೀನು ಇರುತ್ತದೆ ಎಂದರೆ ಇರಬಹುದು. ಅವರ ಮನೆತನದಿಂದ ಚೆನ್ನಾಗಿದ್ದಾರೆ ಎಂದರೆ ಸರಿ . ನನ್ನ ಮದುವೆ ನನ್ನ ಅಣ್ಣನ ಮದುವೆಯ ಜೊತೆಗೆ ಆಗಿರುತ್ತದೆ ಯಾವ ಇಸ್ವಿ ಅಂತ ನನಗೆ ಗೊತ್ತಿಲ್ಲ. ಮದುವೆಯಾದ ಮೇಲೆ ಗಂಡನ ಮನೆಯಲ್ಲಿ ವಾಸ ಇರುತ್ತೇನೆ ಎಂದರೆ ಸರಿ . ದಾವಾದಲ್ಲಿ ಸೇರಿಸಿರುವ ದಾವಾ ಆಸ್ತಿಗಳ ಸರ್ವೇ ನಂಬರ ಮತ್ತು ಕ್ಷೇತ್ರ ನನಗೆ ಗೂತ್ತಿಲ್ಲ. ಆದರೆ ನನಗೆ ಭಾಗ ಬೇಕು ಅವುಗಳ ಚೆಕ್ಕು ಬಂದಿ ಸಹ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಕ್ರಮ ಸಂಖ್ಯೆ-4, 5 ಮತ್ತು 8 ಇವುಗಳ ಸರ್ವೇ ನಂಬರ ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳನ್ನು ಗುರುಶಾಂತಪ್ಪ ತನ್ನ ಸ್ವಂತ ಆದಾಯದಿಂದ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಮನೆಯಲ್ಲಿ ಹೇಳಿಕೊಳ್ಳುವ ಆದಾಯ ಇರಲಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಹೋಲದಿಂದ ಬರುವ ಆದಾಯ ಊಟ ಬಟ್ಟೆಗೆ ಆಗುತ್ತಿತ್ತು ಅನ್ನುತ್ತಾರೆ. ನಮ್ಮ ತಂದೆ ಮತ್ತು ಅವರ ಅಣ್ಣ ತಮ್ಮಂದಿರು ಭಾಗ ಆಗುವ ಸಮಯದಲ್ಲಿ ನನ್ನ ತಂದೆಗೆ ಎಷ್ಟು ಭಾಗ ಬಂದಿರುತ್ತದೆ ಅಂತ ಗೊತ್ತಿಲ್ಲ. ದಾವಾ ಆಸ್ತಿ ಕ್ರಮ ಸಂಖ್ಯೆ-4,5 ಮತ್ತು 8 ಗುರುಶಾಂತಪ್ಪ ಯಾರಿಂದ ಖರೀದಿಸಿದ್ದರು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾರಿಂದ ಅಂತ ಗೊತ್ತಿಲ್ಲ ಮೂವರು ಸೇರಿ ಖರೀದಿಸಿದ್ದಾರೆ. ನನ್ನ ತಂದೆ ತೀರಿಕೊಂಡಾಗ ನನ್ನ ತಮ್ಮನಿಗೆ ಹಾಗೂ ನನ್ನ ತಂಗಿಗೆ ಎಷ್ಟು ವರ್ಷ ವಯಸ್ಸಾಗಿತ್ತು ಅಂತ ಗೊತ್ತಿಲ್ಲ.

6. ದಿಃ24-01-2007 ರಂದು ಊರ ಮುಖಂಡರ ಸಮಕ್ಷಮ ಪಾಲು ವಿಭಾಗ ಆಗಿರುತ್ತದೆ ಎಂದರೆ ಸರಿ ಆದರೆ ನಮ್ಮನ್ನು ಕರೆದಿರಲಿಲ್ಲ. ನಮ್ಮನ್ನು ಕರೆದಿದ್ದರು ಹಾಜರು ಇರಲಿಲ್ಲ ಎಂದರೆ ಸರಿಯಲ್ಲ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಕ್ರಮ ಸಂಖ್ಯೆ-4, 5 ಮತ್ತು 8 ಸದರಿ ಪಾಲು ವಿಭಾಗದಲ್ಲಿ ಸೇರಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳನ್ನು ಗುರುಶಾಂತಪ್ಪ ಸ್ವಾರ್ಜಿತವಾಗಿ ಕೊಂಡುಕೊಂಡಿದ್ದರಿಂದ ಅವುಗಳನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ. ಮೂವರು ಸೇರಿ ತೆಗೆದುಕೊಂಡಿರುತ್ತಾರೆ. ನಾನು ಓದಿರುವುದಿಲ್ಲ. ನಾನು ಒಂದನೆಯ ತರಗತಿಗೆ ಹೋಗಿ ಬಿಟ್ಟಿರುತ್ತೇನೆ. ನಾನಾಗಿಯೇ ಶಾಲೆ ಬಿಟ್ಟಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ 1 ನೇ ಪ್ರತಿವಾದಿಯ ಗಂಡನಿಗೆ ಕೂಲಿ ಮಾಡಿ ಸರಕಾರಿ ನೌಕರಿಗೆ ಸೇರಿಸಿದ್ದೇನೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮದುವೆಯಾಗಿ ಹೋದ ನಂತರ ದಾವಾ ಆಸ್ತಿ ಕ್ರಮ ಸಂಖ್ಯೆ-4,5 ಮತ್ತು 8 ನ್ನು ಖರೀದಿಸಿರುತ್ತಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಮೂವರು ಸೇರಿ ತೆಗೆದುಕೊಂಡಿದ್ದಾರೆ ಅನ್ನುತ್ತಾರೆ. ದಾವಾ ಆಸ್ತಿಯನ್ನು ಖರೀದಿಸಲು ನಾನು ಸಹ ಕೂಲಿ ಕೆಲಸ ಮಾಡಿರುತ್ತೇನೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತವರು ಮನೆಯಿಂದ ಗುರುಶಾಂತಪ್ಪ ನನಗೆ ಕಾಯಿಕಣ ಕೊಡುತ್ತಿದ್ದರು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು

ಮೊದಲು ಕೊಡುತ್ತಿದ್ದರು ಈಗ 3 ವರ್ಷದಿಂದ ಕೊಟ್ಟಿಲ್ಲ ಅನ್ನುತ್ತಾರೆ. ಮದುವೆಯ ಕಾಲಕ್ಕೆ ಏನು ಕೊಡಬೇಕಾಗಿರುತ್ತದೊ ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮದುವೆಯ ಕಾಲಕ್ಕೆ ನನಗೆ 20 ವರ್ಷ ವಯಸ್ಸಾಗಿತ್ತು. ಪ್ರತಿವಾದಿಯರಿಗೆ ತೊಂದರೆ ಕೊಡಬೇಕು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಶಂಕರಮ್ಮ ಇವಳು ಈ ದಾವೆಯಲ್ಲಿ ಬಂದು ಸತ್ಯವನ್ನು ಹೇಳುತ್ತಾರೆ ಅಂತ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ ಏನು ಗೊತ್ತಿಲ್ಲ ಅನ್ನುತ್ತಾರೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ

**ದಿಃ 03-11-2020 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಶ್ರೀ ಕೆ ಎಸ್ ವಿ ವಕೀಲರಿಂದಃ**

ನನಗೆ ಈಗ 50 ವರ್ಷ ವಯಸ್ಸಾಗಿರುತ್ತದೆ. ನನ್ನ ತಂದೆ ಯಾವ ಇಸ್ವಿಯಲ್ಲಿ ತೀರಿಕೊಂಡಿರುತ್ತಾರೆ ಅಂತ ಗೊತ್ತಿಲ್ಲ ಬಹಳ ವರ್ಷ ಆಗಿರುತ್ತದೆ. ನನ್ನ ತಂದೆ ತೀರಿಕೊಂಡಾಗ ನನಗೆ 20 ವರ್ಷ ವಯಸ್ಸಾಗಿತ್ತು. ನನ್ನ ತಂದೆ ತೀರಿಕೊಂಡಾಗ ಗುರುಶಾಂತಪ್ಪನಿಗೆ 20 ವರ್ಷ ವಯಸ್ಸಾಗಿತ್ತು. ನಮ್ಮ ತಂದೆ ಮದ್ಯಪಾನ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆ ಕುಡಿದು ಓಡಾಡುತ್ತಿದ್ದು ಆತ್ಮಹತ್ಯೆ ಮಾಡಿಕೊಂಡರು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಮೊದಲು ಹೌದು ಅಂತ ಹೇಳಿ ನಂತರದಲ್ಲಿ ಬೇರೆಯವರು ಕುಡಿಸಿ ಮಾಡಿಸಿದ್ದಾರೆ ಅನ್ನುತ್ತಾರೆ. ನನ್ನ ಇನ್ನೊಬ್ಬ ಅಣ್ಣನಿಗೆ ತಲೆ ಸರಿ ಇರಲಿಲ್ಲ ಎಂದರೆ ಸರಿ . ಅವರು ಯಾವುದೇ ದುಡಿಮೆ ಮಾಡುತ್ತಿರಲಿಲ್ಲ ಎಂದರೆ ಸರಿ . ನಮ್ಮ ಮನೆತನದಲ್ಲಿ ಬಹಳ ಬಡತನ ಇತ್ತು ಎಂದರೆ ಸರಿ . ಗುರುಶಾಂತಪ್ಪ ಕೂಲಿನಾಲಿ ಮಾಡಿ ವಿದ್ಯಾಭ್ಯಾಸ ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ಎಲ್ಲರೂ ಮಾಡಿರುತ್ತಾರೆ. ನನ್ನ ಅಣ್ಣನೇ ಮನೆತನದ ನಿರ್ವಹಣೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಮ್ಮನು ಸಹ ಮಾಡುತ್ತಿದ್ದನು. ನನ್ನ ಅಣ್ಣ ಬಿಎ ಬಿಯಡ್ ಮಾಡಿಕೊಂಡ ನಂತರ ಬಹಳ ಕೆಲಸ ಇಲ್ಲದೆ ಇರುವ ಕಾರಣ ಮನೆಯಲ್ಲಿ ಇದ್ದರು ಎಂದರೆ ಸರಿ . ಆ ಸಮಯದಲ್ಲಿ 1 ನೇ ಪ್ರತಿವಾದಿಯ ತಂದೆ ಶಿವರುದ್ರಪ್ಪ ಕೆಲಸ ಕೊಡಿಸಿದ್ದಾರೆ ಎಂದರೆ ಸರಿಯಲ್ಲ. ಅವರು ಪ್ರಯತ್ನ ಪಟ್ಟಿರುತ್ತಾರೆ.

2. ನನ್ನ ಮದುವೆಯ ಕಾಲಕ್ಕೆ ಬಡತನ ಇತ್ತು ಎಂದರೆ ಸರಿ. ಗುರುಶಾಂತಪ್ಪ ಕಾಲಕ್ಕೆ ನಿಮ್ಮ ಮದುವೆ ಮಾಡಿದ್ದಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನ್ನ ಅಮ್ಮ ಇಬ್ಬರ ಮದುವೆ ಮಾಡಿದ್ದಾರೆ ಅನ್ನುತ್ತಾರೆ. ನನ್ನ ಮದುವೆಯ ಕಾಲಕ್ಕೆ ಏನು ಇಲ್ಲದೆ ಇರುವ ಕಾರಣ ಶಿವರುದ್ರಪ್ಪ ಇವರ ಕಡೆಯಿಂದ ಹಣ ಮತ್ತು ಬಂಗಾರವನ್ನು ನನಗೆ ಕೊಟ್ಟಿರುತ್ತಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ. ಮದುವೆಯ ಕಾಲಕ್ಕೆ ನನಗೆ ಏನು ಕೊಡಬೇಕಾಗಿತ್ತೊ ನನಗೆ ಆ ಸಮಯದಲ್ಲಿ ಕೊಟ್ಟು ಕಳುಹಿಸಿದ್ದಾರೆ ಎಂದರೆ ಸರಿಯಲ್ಲ.

3. 2 ನೇ ವಾದಿ ಎಸ್ ಎಸ್ ಎಲ್ ಸಿ ಜಸ್ಟ್ ಪಾಸಾಗಿದ್ದ ಎಂದರೆ ಸರಿ. ಆತನಿಗೂ ಕೆಲಸ ಕೊಡಿಸಬೇಕು 1 ನೇ ಪ್ರತಿವಾದಿಯ ಗಂಡ ಆರ್ಟಿಕಲ್ಚರ್ ತರಬೇತಿ ಕೊಡಿಸಿದರು ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಕೆಲಸ ಕೊಡಿಸಲಿಲ್ಲ ಅನ್ನುತ್ತಾರೆ. ಅವನು ಅತ್ಯಂತ ಕಡಿಮೆ ಅಂಕ ಪಡೆದಿದ್ದರಿಂದ ಕೆಲಸ ಸಿಗಲಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ ಜೀವಿತ ಕಾಲದಲ್ಲಿ ನನ್ನ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಿದ್ದಾರೆ ಎಂದರೆ ಸರಿಯಲ್ಲ. ಶಂಕರಮ್ಮ ಇವರ ಮಕ್ಕಳಿಗೆ ನನ್ನ ಅಣ್ಣ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿಯ 2 ನೇ ಪ್ರತಿವಾದಿಯ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಿದ್ದಾರೆ ಎಂದರೆ ಮಾಡಿರಬಹುದು. ಶಂಕರಮ್ಮಳ ಮದುವೆಯನ್ನು ಗುರುಶಾಂತಪ್ಪ ಇವರೇ ಮುಂದಾಳತ್ವವಹಿಸಿ ಮಾಡಿದ್ದಾರೆ ಎಂದು ಸೂಚಿಸಿದ

ಪ್ರಶ್ನೆಗೆ ಸಾಕ್ಷಿಯು ನನ್ನ ತಮ್ಮಂದಿರು ಮಾಡಿಸಿದ್ದಾರೆ ಅನ್ನುತ್ತಾರೆ. ಶಂಕರಮ್ಮ ಇವರ ಮದುವೆಯ ಕಾಲಕ್ಕೆ ಏನೇನು ಕೊಡಬೇಕು ಅದನ್ನು ಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ಶಂಕರಮ್ಮ ಈಗ ಬದುಕಿರುತ್ತಾರೆ. ಅವರನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಅವರು ನನಗೆ ಏನು ಬೇಡ ಅಂತ ಹೇಳಿದ್ದಕ್ಕೆ ಮಾಡಿಲ್ಲ ಅನ್ನುತ್ತಾರೆ. ಶಂಕರಮ್ಮನ ಮದುವೆಯ ಕಾಲಕ್ಕೆ ಮತ್ತು ನಿಮ್ಮ ಮದುವೆಯ ಕಾಲಕ್ಕೆ ಕೊಡುವುದನ್ನು ಕೊಟ್ಟಿದ್ದಾರೆ ಅಂತ ನೀವು ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾನು ಮಗಳನ್ನು ಕೊಟ್ಟಿರುತ್ತೇನೆ ಅವರು ಬರುವುದಿಲ್ಲ ಅಂತ ಹೇಳಿದ್ದಾರೆ ಅನ್ನುತ್ತಾರೆ.

4. ಶಂಕರಮ್ಮ ಅನೇಕ ಬಾರಿ ಈ ರೀತಿ ಕೇಸು ಹಾಕುವುದು ಬೇಡ ಅಂತ ಬೈದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮಗಳನ್ನು ಕೊಟ್ಟಿರುತ್ತೇನೆ ಕೆಲಸ ಕೊಡಿಸಿರುವುದಿಲ್ಲ ಅಂತ ಕೇಸು ಹಾಕಿದ್ದೇನೆ ಅನ್ನುತ್ತಾರೆ. ನನಗೆ ಭಾಗ ಬೇಕು. ದಿಃ24-01-2007 ರಂದು ನನ್ನ ಅಣ್ಣ ತಮ್ಮಂದಿರು ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಪಾಲು ಪಟ್ಟಿಯಲ್ಲಿ ಹೇಳಿದ ಪ್ರಕಾರ ಆಸ್ತಿಗಳನ್ನು ಅನುಭವಿಸುತ್ತಿದ್ದಾರೆ ಎಂದರೆ ಸರಿ . ಆದರೆ ಪಾಲು ವಿಭಾಗ ಸರಿ ಇರುವುದಿಲ್ಲ. ಪಾಲು ವಿಭಾಗ ಪತ್ರ ಸರಿ ಇರುವುದಿಲ್ಲ ಅಂತ ನಾನಾಗಲೀ ಮತ್ತು 2 ನೇ ವಾದಿಯಾಗಲೀ ನ್ಯಾಯಾಲಯದ ಮುಂದೆ ಪ್ರಕರಣದ ದಾಖಲಿಸಿರುವುದಿಲ್ಲ. ದಾವೆ ಹಾಕಲು ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ಗುರುಶಾಂತಪ್ಪನಿಗೆ ಇಬ್ಬರು ಮಕ್ಕಳು ಇರುತ್ತಾರೆ. ಅವರಿಬ್ಬರನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ಸದರಿ ಪಾಲು ವಿಭಾಗ ಪತ್ರದಲ್ಲಿ ನಮ್ಮ ತಾಯಿಗೆ ಜೀವನಾಂಶಕ್ಕೆ ತೆಗೆದಿದ್ದಾರೆ ಎಂದರೆ ಸರಿ ಅದನ್ನು ನನ್ನ ತಮ್ಮ 2 ನೇ ವಾದಿ ಅನುಭವಿಸುತ್ತಿದ್ದಾನೆ. ಅದನ್ನು ಆನತನಿಗೆ ಬಿಟ್ಟು ಕೊಡು ಅಂತ ಹೇಳಿದರೆ ಬಿಟ್ಟು ಕೊಡಲಿಲ್ಲ ಆ ಕಾರಣ ಕೇಸು ಹಾಕಿದ್ದೇವೆ ಅಂತ ಸಾಕ್ಷಿ ಸ್ವತಃ ನುಡಿಯುತ್ತಾರೆ.

**ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮಧ್ಯಾಹ್ನ 2-45 ಗಂಟೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ

**<u>ದಿಃ 03-11-2020 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು</u>**

**ಮಧ್ಯಂತರ ಅರ್ಜಿ ನಂ.9 ಮತ್ತು 10 ರ ಆದೇಶದ ಮೇರೆಗೆ ಪಾಟೀ ಸವಾಲುಃ**

**<u>ಪಾಟೀ ಸವಾಲುಃ ಶ್ರೀ ಕೆ ಎಸ್ ವಿ ವಕೀಲರಿಂದಃ</u>**

ನನ್ನ ಮದುವೆ 2000 ನೇ ಸಾಲಿನಲ್ಲಿ ಆಗಿರುತ್ತದೆ. ನನ್ನ ಮದುವೆಯ ಕಾಲಕ್ಕೆ ನನ್ನ ತಂದೆಯ ಹೆಸರಿಗೆ 1 ಎಕರೆ ಜಮೀನು ಇತ್ತು. ಅದು ನಮ್ಮ ಮನೆಯ ಜೀವನ ನಿರ್ವಹಣೆಗೆ ಸಾಕಾಗುತ್ತಿತ್ತು ಎಂದರೆ ಸರಿ. ಸಾಕಷ್ಟು ಆದಾಯ ಇಲ್ಲ ನನ್ನನ್ನು ನನ್ನ ತಾಯಿಯ ತಮ್ಮನಿಗೆ ಮದುವೆ ಮಾಡಿಕೊಟ್ಟರು ಎಂದರೆ ಸರಿ . ನನ್ನ ಹಾಗೂ ನನ್ನ ಬಾವ 2 ನೇ ಪ್ರತಿವಾದಿ ಮದುವೆ ಒಂದೆ ಬಾರಿಗೆ ಆಗಿದೆ ಎಂದರೆ ಸರಿ . ಮದುವೆಯ ಮಾಡಲು ಖರ್ಚು ಮಾಡಲು ಆಗುವುದಿಲ್ಲ ಅಂತ ಒಂದೇ ಸಾರಿ ಮಾಡಿದ್ದಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಕೆಲಸ ಕೊಡಿಸುತ್ತೇವೆ ಅಂತ 80 ಸಾವಿರ ರೂ. ಮತ್ತು ಬೈಕು ಕೊಡಿಸುತ್ತೇವೆ ಅಂತ 50 ಸಾವಿರ ರೂ. ತೆಗೆದುಕೊಂಡಿದ್ದಾರೆ ಅನ್ನುತ್ತಾರೆ. ನನ್ನ ಗಂಡ ಸಿಪಿಯಡ್ ತರಬೇತಿ ಹೊಂದಿರುತ್ತಾರೆ. ಗುರುಶಾಂತಪ್ಪ ನನ್ನ ಗಂಡನಿಗೆ ಆರ್ಟಿಕಲ್ಚರ್ ತರಬೇತಿ ಕೊಡಿಸಿದ್ದಾರೆ ಎಂದರೆ ಗೊತ್ತಿಲ್ಲ. ಕೆಲಸ ಕೊಡಿಸುತ್ತೇವೆ ಅಂತ ಹಣವನ್ನು ಪಡದಿದ್ದಾರೆ.

2. 2 ನೇ ವಾದಿಯು ಬಿ-ದುರ್ಗದ ಶಾಲೆಯಲ್ಲಿ ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ಸರಿಯಲ್ಲ. ಇಲ್ಲಿಯೇ ಹೊಳಲ್ಕೆರೆಯಲ್ಲಿ ಹೋಗುತ್ತಿದ್ದರು. ಆ ಶಾಲೆಗೆ ಗುರುಶಾಂತಪ್ಪ ಹೇಳಿ ಕಳುಹಿಸಿದ್ದರೂ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಅದು ಖಾಸಗಿ ಶಾಲೆ ಗ್ರ್ಯಾಂಟ್ ಆಗುತ್ತದೆ ಅಂತ ಹಣ ಪಡೆದರು ಅನ್ನುತ್ತಾರೆ. ನನ್ನ ಯಜಮಾನರು ಅವರೇ ಸ್ವತಃ ಶಾಲೆಗೆ ಹೋಗುವುದನ್ನು ಬಿಟ್ಟರು ಎಂದರೆ ಸರಿಯಲ್ಲ. ಹಣ ಕಟ್ಟದೆ ಇರುವ ಕಾರಣ ವಾಪಸ್ಸು ಕಳುಹಿಸಿದ್ದಾರೆ ಅನ್ನುತ್ತಾರೆ. 2ನೇ ವಾದಿಯು ಹಣ ಕೊಟ್ಟಿರುವ ಬಗ್ಗೆ ಎಲ್ಲಿಯಾದರೂ ಪಂಚಾಯಿತಿ ಮಾಡಿದ್ದೀರಾ ಮತ್ತು ಪ್ರಕರಣ ದಾಖಲಿಸಿದ್ದೀರಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಹಣ ಕೇಳಿದ್ದಕ್ಕೆ ಕೊಡುತ್ತೇವೆ ಕೊಡುತ್ತೇವೆ ಅಂತ ಹೇಳಿದ್ದಾರೆ ಅನ್ನುತ್ತಾರೆ. ನನ್ನ ತಂದೆ ತಾಯಿ 80 ಸಾವಿರ ರೂ. ಕೊಟ್ಟಿದ್ದಾರೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಎಸ್ ಎಸ್ ಎಲ್ ಸಿ ಓದುತ್ತಿರುವಾಗಲೇ ಕೆಲಸ ಸಿಗುತ್ತದೆ ಅಂತ ನನ್ನ ತಂದೆ ತಾಯಿ ಹೋಗಿ ಕೊಟ್ಟಿದ್ದಾರೆ ಅನ್ನುತ್ತಾರೆ. ಬೈಕು ಕೊಡಿಸುತ್ತಾರೆ ಅಂತ 50 ಸಾವಿರ ರೂ. ಕೊಟ್ಟಿರುತ್ತೇನೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ತಾಯಿ ಗುರುಶಾಂತಪ್ಪನಿಗೆ ಹಣ ಕೊಟ್ಟಿರುವಾಗ ಮುನಿಯಪ್ಪ ಎಂಬುವರು ಇದ್ದರು ಅವರು ಈಗ ತೀರಿಕೊಂಡಿರುತ್ತಾರೆ.

3. ನನ್ನ ಮದುವೆಯ ಮಾತುಕತೆ ನೂಲೆನೂರು ಗ್ರಾಮದಲ್ಲಿ ಆಗಿರುತ್ತದೆ. ಮಾತುಕತೆಯ ಸಂದರ್ಭದಲ್ಲಿ ನನ್ನ ಅಪ್ಪ ಅಮ್ಮ, ಗುರುಶಾಂತಪ್ಪ ಮತ್ತು ಮುನಿಯಪ್ಪ ಇದ್ದರು. ಮತ್ತೆ ಬೇರೆ ಯಾರು ಇದ್ದರು ಅಂತ ಗೊತ್ತಿಲ್ಲ. 2007 ನೇ ಸಾಲಿನಲ್ಲಿ ನಮ್ಮ ಮನೆಯವರು ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ . ಪಾಲು ವಿಭಾಗದ ಪ್ರಕಾರ ಬಂದಂತಹ ಆಸ್ತಿಗಳನ್ನು ಈಗ

ಅನುಭವಿಸುತ್ತಿದ್ದೇವೆ ಎಂದರೆ ಸರಿ . ನನ್ನ ಅಜ್ಜಿಗೆ ಔಷದೋಪಚಾರ ಮತ್ತು ಖರ್ಚು ಗುರುಶಾಂತಪ್ಪ ನೋಡಿಕೊಳ್ಳುತಿದ್ದರು ಎಂದರೆ ಸರಿಯಲ್ಲ. ನಾವೇ ನೋಡಿಕೊಳ್ಳುತ್ತಿದ್ದೇವು. ಅದೇ ರೀತಿಯಾಗಿ 2 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ಅಜ್ಜಿಗೆ ನಾವೇ ನೋಡಿಕೊಳ್ಳುತ್ತಿದ್ದೇವೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೂವರು ಮಕ್ಕಳು ಸರಿಯಾಗಿ ನೋಡಿಕೊಳ್ಳುತಿದ್ದರು ಎಂದರೆ ಸರಿಯಲ್ಲ.

4. ಪಾಲು ವಿಭಾಗ ಆಗುವ ಕಾಲಕ್ಕೆ ನನ್ನ ಗಂಡನಿಗೆ ಕೊಟ್ಟಿರುವ 80 ಸಾವಿರ ರೂ. ಮತ್ತು 50 ಸಾವಿರ ರೂ. ಕೊಡಬೇಕು ಅಂತ ಕೇಳಿದ್ದೇವೆ ಆಗ ಗುರುಶಾಂತಪ್ಪ ಮತ್ತು ತಾಯಿ ಗೌರಮ್ಮ ಇವರು ಹಾಲಪ್ಪನಿಗೆ ಹೊಡೆದಿರುತ್ತಾರೆ. ಗೌರಮ್ಮನಿಗೆಜೀವನಾಂಶಕ್ಕೆ ತೆಗೆದಿರುವ ಜಮೀನನ್ನು ನಾವೇ ನೋಡಿಕೊಳ್ಳುತ್ತಿದ್ದೇವೆ ಎಂದದಿರೆ ಸರಿ . ಈಗ ನಮಗೆ ಬೇಕು ಅಂತ ಕೇಳುತ್ತಿದ್ದಾರೆ. ಪಾಲು ವಿಭಾಗ ಪತ್ರದ ಪ್ರಕಾರ ಗೌರಮ್ಮ ತೀರಿಕೊಂಡ ನಂತರ ಅವರ ಜೀವನಾಂಶಕ್ಕೆ ತೆಗೆದ ಜಮೀನನ್ನು ಮೂವರು ಮಕ್ಕಳು ಸಮನಾಗಿ ತೆಗೆದುಕೊಳ್ಳಬೇಕು ಅಂತ ಬರೆದಿರುತ್ತಾರೆ ಎಂದರೆ ಸರಿ ಆದರೆ ಸತ್ತ ನಂತರ ನಮಗೆ ಕೊಡುತ್ತೇವೆ ಅಂತ ಹೇಳಿ ಈಗ ದೌರ್ಜನ್ಯ ಮಾಡುತ್ತಿದ್ದಾರೆ ಅನ್ನುತ್ತಾರೆ. ಈ ವಿಷಯ ಶಂಕರಮ್ಮ ಮತ್ತು ನಮ್ಮ ಅಮ್ಮನಿಗೆ ಗೊತ್ತಿತ್ತು ಅವರನ್ನು ಕರೆಯಲಿಲ್ಲ ಬರಬೇಡ ಅಂತ ಹೇಳಿರುತ್ತಾರೆ. ಪಾಲು ವಿಭಾಗ ಪತ್ರದ ಪ್ರಕಾರ ನಿಮಗೆ ಸರಿಯಾದ ಭಾಗ ಬಂದಿದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಅವರಿಗೆ ಬೇಕಾದವರನ್ನು ಕರೆಯಿಸಿ ಪಾಲು ವಿಭಾಗ ಮಾಡಿಕೊಂಡಿದ್ದಾರೆ ಅನ್ನುತ್ತಾರೆ. ನಾವು ಕಂಡಾಪುರ ಶಿವಣ್ಣ ಇವರನ್ನು ಕರೆಸಿದ್ದೇವು. ಅವರು ಈಗ ಇದ್ದಾರೆ ಆದರೆ ಮುಂಚೆಯ ಹಾಗೆ ಇಲ್ಲ. ಅವರು ಈಗ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಲು ಆಗುವುದಿಲ್ಲ ಮತ್ತು ಚೆನ್ನಾಗಿ ಇಲ್ಲ ಅನ್ನುತ್ತಾರೆ. ನಾನು ಸೃಷ್ಟಿ ಮಾಡಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಾಸ್ತಿ ಆಸ್ತಿ ಬರಬೇಕು ಅಂತ ನಾವೆಲ್ಲರೂ ಷರೀಕಾಗಿ ಸುಳ್ಳು ಕೇಸನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಶಂಕರಮ್ಮ ಜೀವಂತ ಇದ್ದಾರೆ. ಅವರನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಅವರನ್ನು ಕರೆದೆವು ನನಗೆ ಆಸ್ತಿ ಬೇಡ ಅಂತ ಹೇಳಿದ್ದಾರೆ ಅನ್ನುತ್ತಾರೆ. ಅವರಿಗೆ ಸತ್ಯ ಗೊತ್ತಿರುವುದರಿಂದ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ